# ಅನಗತ್ಯ ಪ್ರದರ್ಶನ



■ ಮಲ್ಲಿಕಾರ್ಜುನ ಸುರಧೇನುಪುರ

ಅಂದು ಶನಿವಾರ ಅಕ್ಬರನ ಆಸ್ಥಾನದಲ್ಲಿ ಮಂತ್ರಿಗಳು. ಮಹೋದಯರು ತಮ್ಮ ತಮ್ಮ ಆಸನಗಳಲ್ಲಿ ಆಸೀನರಾದ ಮೇಲೆ ಅಕ್ಬರನು ಕಡುಕೋಪದಿಂದ ಬೀರಬಲ್ಲನಿಗೆ 'ಇನ್ನು ಎಂಟು ದಿನಗಳ ಒಳಗೆ ನೀವು ನಮ್ಮ ಖಜಾನೆಯ ಕೋಶಾಧಿಕಾರಿಗೆ ಒಂದು ಕೆ.ಜಿ. ಅಪ್ಪಟ ಬಂಗಾರವನ್ನು ತಂದು ಒಪ್ಪಿಸಬೇಕು' ಎಂದನು.

ಬೀರಬಲ್ಲ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂದು ಬಗೆದು, ವಿನಮ್ರನಾಗಿ 'ಆಯಿತು ಮಹಾಪ್ರಭುಗಳೆ' ಎಂದನು. ಅಂದಿನ ಸಭೆಯ ಕಾರ್ಯಕಲಾಪಗಳು ಮುಗಿದವು. ಹೊರನಡೆಯುವಾಗ ಬೀರಬಲ್ಲನ ಆಪ್ತರು ಪ್ರಭುಗಳ ಇಂತಹ ಆದೇಶದ ಹಿಂದಿನ ಉದ್ದೇಶ ಏನಿರಬಹುದು? ಬೀರಬಲ್ಲನು ಯಾವ ತಂತ್ರ ಪ್ರಯೋಗಿಸುತ್ತಾನೆ? ಎಂದೆಲ್ಲಾ ಗುಸುಗುಸು ಮತನಾಡಿಕೊಂಡರು. ಬೀರಬಲ್ಲನ ಕಂಡರೆ ಆಗದ, ಒಳಗೊಳಗೆ ಅಸಹನೆ ಇರುವವರು ಬೀರಬಲ್ಲ ಈ ಬಾರಿ ಖೆಡ್ಡಾಕ್ಕೆ ಬಿದ್ದ, ಒಂದು ಕೇಜಿ ಅಪ್ಪಟ ಬಂಗಾರ ಹೊಂದಿಸುವುದೆಂದರೆ ತಮಾಷೆಯೆ, ಪ್ರಭುಗಳ ಕೆಂಗಣ್ಣಿಗೆ ಗುರಿಯಾಗುತ್ತಾನೆ ಎಂದೆಲ್ಲಾ ಮಾತಾಡಿಕೊಂಡು ಖುಷಿಪಟ್ಟರು.

ಎಂಟು ದಿನಗಳು ಕಳೆದವು. ಆಸ್ಥಾನದಲ್ಲಿ ಬೀರಬಲ್ಲ ಸಣ್ಣ ಕೈಚೀಲದೊಂದಿಗೆ ಕುಳಿತಿದ್ದಾನೆ. ಅಕ್ಬರನು 'ಬೀರಬಲ್ಲರೆ ಒಂದು ಕೇಜಿ ಅಪ್ಪಟ ಬಂಗಾರ ತಂದಿರುವಿರಾ?' ಎಂದು ಕೇಳಿದರು.

ಬೀರಬಲ್ಲ 'ಪ್ರಭುಗಳೆ, ನಮ್ಮ ಸಾಮ್ರಾಜ್ಯದಲ್ಲಿ ಹದಿನೆಂಟು, ಇಪ್ಪತ್ತೆರಡು ಕ್ಯಾರೆಟ್ ಬಂಗಾರದ ಆಭರಣಗಳಿವೆ. ಇಪ್ಪತ್ನಾಲ್ಕು ಕ್ಯಾರೆಟ್‌ನ ಅಪ್ಪಟ ಬಂಗಾರದ ಆಭರಣಗಳ ತಯಾರಿಸಲು ಸಾಧ್ಯವಿಲ್ಲ ಅಂತ ಅಕ್ಕಸಾಲಿಗರು ಹೇಳುತ್ತಾರೆ.